ಒಂದಾನೊಂದು ಕಾಲದಲ್ಲಿ ವಿದ್ಯುನ್ಮಾಲಿ ಮತ್ತು ಮಾಲಿನಿ ರಾಕ್ಷಸ ದಂಪತಿಗಳು ವಾಸವಾಗಿದ್ದರು. ಅವರಿಗೆ ಬಹುಕಾಲ ಮಕ್ಕಳಿರಲಿಲ್ಲ. ಹೇಗಾದರೂ ಮಗುವನ್ನು ಪಡೆಯಬೇಕೆಂದು ನಿರ್ಧರಿಸಿದ ಮಾಲಿನಿ ತಪಸ್ಸನ್ನಾಚರಿಸಲು ನಿರ್ಧರಿಸುತ್ತಾಳೆ. ಕಾಡಿಗೆ ತೆರಳಿ ಮಹಿಷಿ ಅಂದರೆ ಎಮ್ಮೆಯ ರೂಪದಲ್ಲಿ ತಪಸ್ಸಿಗೆ ತೊಡಗುತ್ತಾಳೆ.

ಆಕೆಯ ಕಠೋರ ತಪಸ್ಸಿನಿಂದ ಹೊಮ್ಮುವ ಶಾಖ ಋಷಿಯೊಬ್ಬನ ತಪಸ್ಸಿಗೆ ಭಂಗ ತರುತ್ತದೆ. ಇದರಿಂದ ಕೋಪಿತನಾದ ಋಷಿ ಜ್ಞಾನದೃಷ್ಟಿಯಿಂದ ಮಾಲಿನಿ ತಪಸ್ಸನ್ನಾಚರಿಸುವುದನ್ನು ತಿಳಿದುಕೊಳ್ಳುತ್ತಾನೆ. 'ಮಹಿಷಿಯ ರೂಪದಲ್ಲಿ ತಪಸ್ಸನ್ನಾಚರಿಸುತ್ತಿರುವುದರಿಂದ ನಿನ್ನ ಹೊಟ್ಟೆಯಲ್ಲಿ ಮಹಿಷ ಅಂದರೆ ಕೋಣವೇ ಜನ್ಮತಾಳಲಿ' ಎಂದು ಶಪಿಸುತ್ತಾನೆ. ಇದರ ಫಲವಾಗಿ ಜನಿಸಿದ ಮಗುವೇ ಮಹಿಷಾಸುರ. ಮಾಲಿನಿ ತನ್ನ ಮಗ ಒಂದು ಕೋಣವೆಂದು ನೆನೆದು ತುಂಬಾ ದುಃಖಿತಳಾಗುತ್ತಾಳೆ. ಆದರೂ ತನ್ನ ಹೊಟ್ಟೆಯಲ್ಲಿ ಜನಿಸಿದ ಮಗುವನ್ನು ತುಂಬಾ ಪ್ರೀತಿಸುತ್ತಾಳೆ.

ಸ್ಥಳೀಯರ ದಂತಕಥೆಗಳ ಪ್ರಕಾರ ಆ ಮಹಿಷಾಸುರನ ಪಟ್ಟಣವೇ, ಮಹಿಷನು ನೆಲೆಸಿದ್ದ ಊರೇ ಇಂದಿನ ಮೈಸೂರು.

ಈನಡುವೆ ಮಹಿಷಾಸುರ ಬಾಲಕನಾಗಿರುವಾಗ ತಂದೆ ವಿದ್ಯುನ್ಮಾಲಿ ದೇವೇಂದ್ರನ ವಿರುದ್ಧ ಯುದ್ಧ ಸಾರಿ ಆ ಯುದ್ಧದಲ್ಲಿ ಅಸುನೀಗುತ್ತಾನೆ. ಸಿಟ್ಟಿಗೆದ್ದ ಮಹಿಷಾಸುರ ದೇವೇಂದ್ರನ ವಿರುದ್ಧ ಯುದ್ಧಕ್ಕೆ ಹೊರಟು ನಿಂತಾಗ ತಾಯಿ ಮಾಲಿನಿ ಅವರನ್ನು ತಡೆದು 'ತಪಸ್ಸು ಮಾಡಿ ಅಧಿಕ ಶಕ್ತಿ ಸಂಪಾದಿಸಿಕೊಂಡು ದೇವತೆಗಳ ವಿರುದ್ಧ ಯುದ್ಧಮಾಡು' ಎಂದು ಸಲಹೆ ನೀಡುತ್ತಾಳೆ.

ಅಮ್ಮನ ಮಾತಿನಂತೆ ಮಹಿಷಾಸುರ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿ 'ನನಗೆ ಮಹಿಳೆಯಿಂದ ಮಾತ್ರ ಸಾವು ಬರುವಂತಹ ವರ ಕೊಡು ಎಂದು ಕೇಳುತ್ತಾನೆ' ಬ್ರಹ್ಮ 'ತಥಾಸ್ತು' ಎಂದು ಅಂತರ್ಧಾನನಾದ.

ಆಗ ಮಹಿಷಾಸುರ ಸೊಕ್ಕಿನಿಂದ ಅಟ್ಟಹಾಸಗೈಯ್ದ. ತನ್ನನ್ನು ಸೋಲಿಸುವವರು ಯಾರೂ ಹುಟ್ಟಿಲ್ಲವೆಂದು ಮೆರೆದ ಮಹಿಷಾಸುರ ರೂಪ ಬದಲಿಸಿಕೊಂಡು ಮೂರ್ಲೋಕವನ್ನೇ ನಡುಗಿಸಿದ. ತನ್ನ ರಕ್ಕಸ ಸೈನ್ಯದೊಂದಿಗೆ ದೇವಲೋಕ ಪ್ರವೇಶಿಸಿ ದೇವತೆಗಳನ್ನೆಲ್ಲಾ ಸೆರೆಹಿಡಿದು ಓಡಿಸಿದ. ಭಯಭೀತರಾದ ದೇವತೆಗಳು ದೇವಿಯ ಮೊರೆ ಹೋಗಿ ಮಹಿಷನನ್ನು ಕೊಲ್ಲುವಂತೆ ಬೇಡಿಕೊಳ್ಳುತ್ತಾರೆ.

ತ್ರಿಮೂರ್ತಿಗಳೂ ತಮ್ಮ ಶಸ್ತ್ರಾಸ್ತ್ರಗಳನ್ನು ದೇವಿಗೆ ನೀಡುತ್ತಾರೆ. ಚಕ್ರ, ಗಧೆ, ಕಡ್ಗ, ತ್ರಿಶೂಲ ಮುಂತಾದ ಸಕಲಾಯುಧ ಸಂಪನ್ನಳಾದ ಮಹಾದೇವಿಯು ಸಿಂಹವಾಹಿನಿಯಾಗಿ ಮಹಿಷಾಸುರನನ್ನು ಯುದ್ಧಕ್ಕೆ ಆಹ್ವಾನಿಸುತ್ತಾಳೆ. ಮಹಿಷಾಸುರನೂ ಯುದ್ಧ ಗೆಲ್ಲುವ ಗರ್ವದಿಂದ ಮತ್ತು ಉತ್ಸಾಹದಿಂದ ರಣರಂಗಕ್ಕೆ ಬರುತ್ತಾನೆ. ಮೊದಲು ಕೋಣನ ರೂಪದಿಂದಲೇ ಯುದ್ಧ ಪ್ರಾರಂಭಿಸಿದ. ದೇವತೆಗಳೆಲ್ಲಾ ಕಾತರದಿಂದ ಯುದ್ಧನೋಡುತ್ತಿದ್ದರು.

ಇತ್ತ ದೇವಿಯು ಮಹಿಷನನ್ನು ನೆಲಕ್ಕೆ ಕೆಡವಿ ಒಂದು ಪಾದದಿಂದ ಮೆಟ್ಟಿ, ತ್ರಿಶೂಲದಿಂದ ತಿವಿದು ಖಡ್ಗದಿಂದ ರುಂಡವನ್ನು ಚೆಂಡಾಡುತ್ತಾಳೆ. ಹೀಗೆ ದೇವತೆಗಳು, ಮಹಿಷಾಸುರನನ್ನು ಕೊಂದ ದೇವಿಗೆ ಪುಷ್ಪವೃಷ್ಟಿಯನ್ನು ಮಾಡಿ ಜಯಘೋಷಗಳನ್ನು ಕೂಗುತ್ತಾರೆ. ಉಗ್ರರೂಪಿಣಿಯಾಗಿದ್ದ ದೇವಿಯನ್ನು ಶಾಂತಗೊಳಿಸಲು ವಿವಿಧ ಸ್ತೋತ್ರಮಂತ್ರಗಳನ್ನು ಪಠಿಸುತ್ತಾರೆ. ಹೀಗೆ ಮಹಿಷಾಸುರನೆಂಬ ರಾಕ್ಷಸನನ್ನು ಸಂಹಾರ ಮಾಡಿದ್ದರಿಂದ ದೇವಿಯನ್ನು ಮಹಿಷಾಸುರ ಮರ್ದಿನಿ ಎಂಬ ಹೆಸರಿನಿಂದ ಕರೆದು, ಪೂಜಿಸತೊಡಗಿದರು.

(ಸಂಗ್ರಹ)



ಮಂಜುನಾಥ್ ಹುಲಿಕೊಪ್ಪದ

# ಬೆಳಕು ಬರ್ತಡೇ

■ ಸಂತೋಷ ಗುಡ್ಡಿಯಂಗಡಿ

ಮನ್ನೆ ನಂದು ಯಾಪಿ ಬಡ್ಡೆ  
ಇತ್ತಲ್ಲಾ ಇತ್ತಲ್ಲ  
ಅಮ್ಮ ಫ್ರಾಕು ಅಪ್ಪ ಸೈಕಲ್  
ತಂದ್ರಲ್ಲಾ ತಂದ್ರಲ್ಲ

ಮನ್ವಿತಣ್ಣ ಮೌಲ್ಯಕ್ಕ  
ಸಿದ್ದಾರ್ಥೂ ಬಂದಿದ್ದ  
ಬೆಸ್ಟ್ ಫ್ರೆಂಡು ಲೋಚನ್ನು  
ಅಮ್ಮನ ಕರ್ಕಂಡ್ ಬಂದಿದ್ದ

ದೊಡ್ಡ ಕೇಕು ಕಟ್ ಮಾಡಿ  
ಎಲ್ಲರಿಗೂ ಕೊಟ್ಟೆ  
ಅರ್ಧ ಕೇಕು ಹಾಗೇ ಉಳಿತು  
ನಾನು ನಿದ್ದೆ ಮಾಡ್ದೆ

ಕಾಲಿಂಗ್ ಬೆಲ್ಲು ಸೌಂಡಾಯ್ತು  
ಯಾರು ಅಂತ ಎದ್ದೆ  
ಅಪ್ಪ ಅಮ್ಮ ಅಜ್ಜಿ ತಾತ  
ಎಲ್ಲರಿಗೂ ನಿದ್ದೆ

ಲೈಟು ಹಾಕಿ ಡೋರು ತೆಗೆದು  
ಹೊರಗೆ ಬಂದು ನೋಡ್ದೇನಿ  
ಯಾಪಿ ಬಡ್ಡೆ ಬೆಳಕು ಅಂತ  
ಜೂವಿನ ಫ್ರೆಂಡ್ಸು ನಿಂತವ್ರೆ

ರ್‍ಯಾಬಿಟ್ಟು ಪಿಗ್ಗಿ ಟೈಗರ್  
ಲಯನ್ನೆಲ್ಲಾ ಬಂದಿದ್ರು  
ಆನೆ ಮಂಕಿ ಜಿರಾಫೆ  
ಬರ್ಡ್ಸೆಲ್ಲಾ ನಿಂತಿದ್ರು

ಬನ್ನಿ ಫ್ರೆಂಡ್ಸ್ ಕಮ್ ಕಮ್ ಅಂತ  
ಎಲ್ಲರಿಗೂ ಕರೆದೆ  
ಎಲ್ಲರನೂ ಬಂದ್ಬಿಟ್ರು  
ಆನೆ ಜಿರಾಫೆ ನಿಂತ್ಬಿಟ್ರು

ಟೈಗರ್ ಲೆಫ್ಟಲಿ ಲಯನ್ ರೈಟಲಿ  
ಉಳಿದವರೆಲ್ಲ ಫ್ರಂಟಲ್ಲಿ  
ಕೇಕು ಕಟ್ ಮಾಡ್ತಿದ್ದೆ  
ಡೋರು ಸೌಂಡಾಯ್ತಲ್ಲಿ

ಆನೆ ಒಳಗೆ ಬಂದಿತ್ತು  
ಡೋರು ಆನೆಯ ಚಿತ್ರ  
ತಗ್ಗಿ ಬಂದ ಜಿರಾಫೆ  
ಎದ್ದರೆ ತಾರಸಿ ಮುಕ್ತ

ಯಾಪಿ ಬಡ್ಡೆ ಬೆಳಕು ಅಂತ  
ಮಂಕಿ ಪಲ್ಟಿ ಹೊಡೀತು  
ಬರ್ಡ್ಸ್ ಎಲ್ಲ ಬಾನಿಗೆ ಹಾರಿ  
ಹೂವಿನ ಮಳೆಯು ಸುರಿತು

ಲಯನ್ ಪಪ್ಪಿ ಕೊಡ್ತು  
ಟೈಗರ್ ಹ್ಯಾಂಡ್‌ಶೇಕ್ ಮಾಡ್ತು  
ಎಲ್ಲರಿಗೂ ಕೇಕು ಕೊಟ್ರೆ  
ಅವ್ರು ಗಿಫ್ಟು ಕೊಟ್ರು

ತ್ಯಾಂಕ್ಯು ಫ್ರೆಂಡ್ಸ್ ಅಂತ ಕೂಗಿದೆ  
ಅಮ್ಮ ಕರ್ದು ಬಿಟ್ರು  
ದಡಬಡ ಎದ್ದು ಕೂತು ಬಿಟ್ಟೆ  
ಫ್ರೆಂಡ್ಸು ಹೋಗಿ ಬಿಟ್ರು

■